**ಸಾಕ್ಷಿಯನ್ನು ದಿಃ 26.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎನ್.ಎನ್., ವಕೀಲರಿಂದಃ**

ಸ.ನಂ.86/2 ವೀರಪ್ಪನವರಿಗೆ ಸೇರಿದ ಸ್ವತ್ತು ಆಗಿದೆ. 9 ನೇ ಪ್ರತಿವಾದಿಯ ತಂದೆ ಈರಪ್ಪನವರಿಂದ ಸ.ನಂ.86/2 ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ನಿಡಿ.1 ರಲ್ಲಿ ವೀರಪ್ಪನವರು 9 ನೇ ಪ್ರತಿವಾದಿಯ ತಂದೆಗೆ ಮಾರಾಟ ಮಾಡಿದ ಸ್ವತ್ತಿನ ಸಂಖ್ಯೆ ಸ.ನಂ.86/3 ನ್ನು ಮಾರಾಟ ಮಾಡಿರುತ್ತಾರೆ ಮತ್ತು ನಿಡಿ.1 ರಲ್ಲಿ ಸ.ನಂ.86/3 ಉಲ್ಲೇಖವಿದೆ ಆದರೆ ಈರಪ್ಪನವರು ಸ.ನಂ.86/2 ನ್ನು ಮಾರಾಟ ಮಾಡಬೇಕಾಗಿರುತ್ತದೆ. ನಿಡಿ.1 ದಿಃ 16.01.1978 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ನಿಡಿ.1 ರ ಪ್ರಕಾರ 9 ನೇ ಪ್ರತಿವಾದಿಯ ಮುನಿವೆಂಕಟಪ್ಪನ ಹೆಸರಿಗೆ ಸ.ನಂ.86/3 ರಂತೆ ಖಾತೆ ಪಹಣಿ ಆಯಿತು ಎಂದರೆ ಸರಿ. ನಿಡಿ.1 ಆದ ಬಳಿಕ ಮುನಿವೆಂಕಟಪ್ಪನೇ ಸ.ನಂ.86/3 ರಲ್ಲಿ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯಲ್ಲಿ ನಮ್ಮ ತಂದೆಯವರು ಸ್ವಾಧೀನದಲ್ಲಿ ಇದ್ದರು, ಸ.ನಂ.86/2 ಮುನಿವೆಂಕಟಪ್ಪನವರು ಸ್ವಾಧೀನದಲ್ಲಿ ಇದ್ದರು ಎಂದು ನುಡಿಯುತ್ತಾರೆ. ಸ.ನಂ.86/2 ಮುನಿವೆಂಕಟಪ್ಪನವರು ಸ್ವಾಧೀನದಲ್ಲಿ ಇದ್ದರು ಎಂದು ತೋರಿಸಲು ಯಾವ ದಾಖಲೆಗಳನ್ನು ಕೊಟ್ಟಿಲ್ಲ. 1978 ರಿಂದ 2024-25 ರವರೆಗೆ ಸ.ನಂ.86/3 ರ ಖಾತೆ ಮತ್ತು ಪಹಣಿಗಳು ಮುನಿವೆಂಕಟಪ್ಪನವರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2020-21 ರವರೆಗೆ ಬರುತ್ತಿತ್ತು ಎಂದು ನುಡಿಯುತ್ತಾರೆ.

2012 ರವರೆಗೂ ಮುನಿವೆಂಕಟಪ್ಪನವರ ಹೆಸರಿನಲ್ಲಿ ಬರುತ್ತಿದ್ದ ಖಾತೆ ಮತ್ತು ಪಹಣಿಗಳನ್ನು ಎಲ್ಲೂ ಪ್ರಶ್ನೆ ಮಾಡಿಲ್ಲ. ಸದರಿ ಮುನಿವೆಂಕಟಪ್ಪನವರ ಹೆಸರಿನಲ್ಲಿ ಬರುತ್ತಿದ್ದ ಸ.ನಂ.86/3 ರ ಖಾತೆ ಮತ್ತು ಪಹಣಿಗಳ ಬಗ್ಗೆ ನನಗೆ 2000 ಇಸವಿಯಲ್ಲಿ ನನಗೆ ಗೊತ್ತಾಯಿತು. ನಿಡಿ.1 ನ್ನು ಎಲ್ಲೂ ಪ್ರಶ್ನೆ ಮಾಡಿಲ್ಲ. 2000 ದಿಂದ 2012 ರವರೆಗೂ ನಾನು 12 ವರ್ಷಗಳ ಸ.ನಂ.86/3 ಕ್ಕೆ ಸಂಬಂಧಪಟ್ಟಂತೆ ಯಾವ ದಾವೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ಸ.ನಂ.86/3 ರಲ್ಲಿ 9 ನೇ ಪ್ರತಿವಾದಿಯ ತಂದೆ ಎಂದಿಗೂ ಸ್ವಾಧೀನದಲ್ಲಿ ಇಲ್ಲ. ಸದರಿ

ಸ.ನಂ.86/3 ರಲ್ಲಿ ನಮ್ಮ ತಾತನ ಕಾಲದಿಂದಲೂ 2021-22 ರವರೆಗೂ ನಾವೇ ಸ್ವಾಧೀನದಲ್ಲಿ ಇದ್ದೇವೆಂದು ನುಡಿಯುತ್ತಾರೆ. ಪ್ರಸ್ತುತವಾಗಿ ಸದರಿ ಜಾಗದಲ್ಲಿ ಯಾರು ಸ್ವಾಧೀನದಲ್ಲಿ ಇಲ್ಲ ಖಾಲಿ ಇದೆ.

ನನ್ನ ಮುಖ್ಯ ವಿಚಾರಣೆಯಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆಂದು ಬಿಡಿಸಿ ಕೊಡಿ ಎಂದು ಪ್ರಾರ್ಥನೆ ಮಾಡಿದ್ದೇನೆ. ಪ್ರಸ್ತುತವಾಗಿ ಸ್ವಾಧೀನದಲ್ಲಿ ಪ್ರತಿವಾದಿ 9(ಇ) ರವರು 2021 ರಿಂದ ಸ್ವಾಧೀನದಲ್ಲಿ ಇದ್ದಾರೆಂದು ನುಡಿಯುತ್ತಾರೆ. ಯಾವ ನಿಖರವಾದ ದಿನಾಂಕ , ತಿಂಗಳು ಮತ್ತು ವರ್ಷದಿಂದ ಪ್ರತಿವಾದಿ 9(ಇ) ನಲ್ಲಿ ಸ್ವಾಧೀನದಲ್ಲಿ ಇದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪೋಲೀಸರು ಪ್ರತಿವಾದಿ.9(ಇ) ರವರೆಗೆ ಸ್ವಾಧೀನವನ್ನು ಬಿಡಿಸಿ ಕೊಟ್ಟರು ನಾನು ಯಾವುದೇ ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ದೂರು ಸಲ್ಲಿಸಿಲ್ಲ. ಪೋಲೀಸರೇ ಸ್ವಾಧೀನವನ್ನು ಬಿಡಿಸಿ ಕೊಟ್ಟರು ಎನ್ನುವುದಕ್ಕೆ ನನ್ನ ಹತ್ತಿರ ಯಾವುದೇ ದಾಖಲೆಗಳು ಇಲ್ಲ ಮತ್ತು ಪೋಲೀಸರು ಯಾವುದೇ ಹೇಳಿಕೆಯನ್ನು ಪಡೆದುಕೊಂಡ ಬಗ್ಗೆ ದಾಖಲೆಗಳು ಇಲ್ಲ.

2021 ರ ಬಳಿಕ ವಾದ ಪತ್ರವನ್ನು ತಿದ್ದುಪಡಿ ಮಾಡಿದಾಗ ನಾನು ಪೋಲೀಸರು ಸ್ವಾಧೀನ ಬಿಟ್ಟು ಕೊಟ್ಟ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದರೆ ಸರಿ ಮತ್ತು ಪ್ರತಿವಾದಿ 9(ಇ) ರವರು 2021 ರಿಂದ ಸ್ವಾಧೀನದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಈರಪ್ಪನವರಿಂದ 9 ನೇ ಪ್ರತಿವಾದಿಯ ತಂದೆ ಮುನಿವೆಂಕಟಪ್ಪನವರು ನಿಡಿ.1 ರಂತೆ ಖರೀದಿ ಮಾಡಿದ ದಿನದಿಂದ ಇಲ್ಲಿಯವರೆಗೂ ಅವರ ಮಗ ಮತ್ತು ಹೆಂಡತಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾವುಗಳು ಸ.ನಂ.86/3 ರಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 2021 ರಲ್ಲಿ ನಮ್ಮನ್ನು ಬಲವಂತವಾಗಿ ಸ್ವಾಧೀನದಿಂದ ಹೊರ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದಾವೆಯು ಕಾಲ ಪರಿಮಿತಿ ಕಾಯಿದೆ ಅಡಿಯಲ್ಲಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ

ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

**(ಚಂದ್ರಶೇಖರ್ ಅಲಬೂರು)**
**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ.**